ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

ಸೌಲಭ್ಯ ಪೂರ್ಣ ಆದರ್ಶ ಗ್ರಾಮ ನಿರ್ಮಾಣ ಕುರಿತು

ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-

331 (403) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಾದ್ಯಂತ ಗ್ರಾಮ ಸಂಪರ್ಕಕ್ಕೆ ಬಾಕಿ ಇರುವ ರಸ್ತೆಗಳ ಉದ್ದಎಷ್ಟು ; ಇದಕ್ಕೆ ಬೇಕಾಗಿರುವ ಅನುದಾನದ ಮೊತ್ತವೆಷ್ಟು ; ಕೇಂದ್ರದ ಹಾಗೂ ರಾಜ್ಯದ ಪಾಲೆಷ್ಟು ; ಪೂರ್ಣ ಸಂಪರ್ಕಕ್ಕೆ ಬೇಕಾದ ಕಾಲಮಿತಿ ಎಷ್ಟು ;

(ಆ) ಪ್ರತಿ ಗ್ರಾಮ ನಿವಾಸಿಗೆ ಯಾವ ರೀತಿಯಲ್ಲಿ ಶುದ್ಧ ಕುಡಿಯುವ ನೀರು ನೀಡಲಾಗುತ್ತಿದೆ ; ಇನ್ನು ಎಷ್ಟು ಗ್ರಾಮಗಳಿಗೆ ಒದಗಿಸಬೇಕಿದೆ; (ಗ್ರಾಮಗಳವಾರು ಮಾಹಿತಿ ನೀಡುವುದು)

(ಇ) ಪ್ರತಿ ಗ್ರಾಮಗಳನ್ನು ಆದರ್ಶ ಗ್ರಾಮವಾಗಿ ಮಾಡಿ, ಇತರ ನಗರಗಳಿಗೆ ವಲಸೆ ಹೋಗುವುದನ್ನು ತಡೆಯಲು ಹಾಕಿಕೊಂಡ ಯೋಜನೆಗಳು ಯಾವುವು ; ಇದಕ್ಕೆ ನಿಗಧಿಪಡಿಸಿರುವ ಅನುದಾನ ಎಷ್ಟು ; ಕೇಂದ್ರ -ರಾಜ್ಯದ ಪಾಲು ಎಷ್ಟು ; ಮಾಹಿತಿ ನೀಡುವುದು?